Regd No M 1299 34 th Year ತಾ|| 16—8—51

SATYAVADI



ಸಂಪಾದಕರು- ಅರಮನೆ ಸಿರಸ್ತೆದಾರ್ ಎಂ. ವಿ. ಸುಬ್ಬಾಯರು [ಬಿಡಿ ಪ್ರತಿ 3 ಪೈ

ಮೈಸೂರು ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮೈಸೂರು ಪೌರಸಭೆ ಆಶ್ರಯದಲ್ಲಿ ನಿನ್ನೆ ರಂಗಾಚಾರ್ಲು ಪುರಭವನ ಮೈದಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ವೈಭವದಿಂದ ನೆರವೇರಿತು. ಬೆಳಿಗ್ಗೆ ಧ್ವಜಾರೋಹಣ ಮಾರ್ಚ್‌ಪಾಸ್ಟ್ ಮುಂತಾದ ಕಾರ್ಯಕ್ರಮಗಳು ನೆರವೇರಿದವು ಸಂಜೆ ಪೌರಾಸ್ಥಾನಕ್ಕೆ ಶ್ರೀ ಟಿ. ನರಸಿಂಹಯ್ಯಂಗಾರ್ಯರವರ ಘನ ಅಧ್ಯಕ್ಷತೆಯಲ್ಲಿ ಭವ್ಯ ಬಹಿರಂಗ ಸಭೆ ಸಡೆದು ಮಾನ್ಯ ಸಚಿವ ಶ್ರೀ ಹಂಗಳ ದಾಸಪ್ಪನವರು ಸಭೆ ಗಾಗಮಿಸಿದ್ದರು

ಶ್ರೀ ಎ. ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ದಿನಾಚರಣೆ

ಕೃಷ್ಣಮೂರ್ತಿಪುರಂನಲ್ಲಿರುವ ಮೈಸೂರು ಸಹೋದರರ ಸುಪ್ರಸಿದ್ಧ ಶ್ರೀ ವರಲಕ್ಷ್ಮೀ ಸಂಗೀತ ವಿದ್ಯಾ ಮಂದಿರದ ಶಾಖೆಯಲ್ಲಿ ಪ್ರಜಾಸಂಘದ ಮುಂದಾಳುಗಳಾದ ಶ್ರೀ ಎ ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯೋತ್ಸವ ವೈಭವದಿಂದ ನೆರವೇರಿತು.

ಮೈಸೂರು ಪತ್ರಿಕೋದ್ಯೋಗಿ ಸಂಘದಲ್ಲಿ ದಿನಾಚರಣೆ

ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಿನ್ನೆ ಬೆಳಿಗ್ಗೆ ಮೈಸೂರು ಪತ್ರಿಕೋದ್ಯೋಗಿ ಸಂಘದಲ್ಲಿ ಸ್ವಾತಂತ್ರ್ಯ ದಿನಾಚರಣೆ ನೆರವೇರಿತು

ಮೈಸೂರಿನಲ್ಲಿ ಹೈಪಾಲಿನಿ ಪಕ್ಷದ ಆರಂಭ

ಮೈಸೂರು ಪ್ರದೇಶ ಮೈಸೂರು ವಿಭಾಗದ ರೈತಾಪಿ ಮತ್ತು ಕೂಲಿ ಪಕ್ಷದ ಸ್ಥಾಪನೆಗಾಗಿ ನಗರದ ಇನ್ನೂರು ಇಪ್ಪತ್ತು ಮಂದಿ ಗಣ್ಯ ಮುಖಂಡರುಗಳು ತಾ|| 14-8-51 ನೇ ಮಂಗಳವಾರ ಬೆಳಿಗ್ಗೆ ಶ್ರೀ ಟಿ ಜೆ ಸನ್ನಾಕಪ್ಪ ಇವರ ಗೃಹದಲ್ಲಿ ಸೇರಿದ್ದರು ನಗರದ ಗಣ್ಯ ವಕೀಲರೂ ಸಮಾಜ ಸುಧಾರಕರೂ ಆದ ಶ್ರೀ ಎಸ್. ಕೆ. ಅನಂತಶೆಟ್ಟರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಇಂದಿನ ಪರಿಸ್ಥಿತಿಯನ್ನರಿತುಕೊಂಡು ಕಿಸಾನ್ ಮಜ್ದೂರ್ ಪ್ರಜಾಪಕ್ಷವನ್ನು ಸ್ಥಾಪಿಸಲಾಯಿತು.

ಕಾರ್ಯಕಾರಿ ಸಮಿತಿ ರಚನೆಯಾಗುವ ವರೆಗೆ ಪಕ್ಷದ ವ್ಯವಸ್ಥಾಪನಾ ಕಾರ್ಯ ಕೈಗೊಳ್ಳಲು ಶ್ರೀ ಎಸ್. ಕೆ. ಅನಂತಶೆಟ್ಟಿ ಬಿ ಎ ಎಲ್. ಎಲ್ ಬಿ. ಇವರು ಅಧ್ಯಕ್ಷರಾಗಿಯೂ, ಶ್ರೀ ಟಿ ಜೆ ಸನ್ನಾಕಪ್ಪ ಎಂ. ಎಸ್. ಸಿ. ಮತ್ತು ಕನ್ನೇಗೌಡನಕೊಪ್ಪಲು ಶ್ರೀ ಎಸ್. ನಾರಾಯಣಸ್ವಾಮಿ ಇವರುಗಳು ಸಹಾಯಕರುಗಳಾಗಿಯೂ ಶ್ರೀಗಳಾದ ಟಿ. ವಿ. ಕೃಷ್ಣಸ್ವಾಮಿ, ಬಿ ಎಸ್ಸಿ, ಲಕ್ಕೇಗೌಡರು, ಆರ್. ಎಸ್. ಮುರಳಿ, ಗೋಪಾಲಯ್ಯಂಗಾರ್, ಎಸ್ ಕೆ. ನಾಗೇರ್ ಇವರನ್ನೊಳಗೊಂಡ ಒಂದು ಆಡ್‌ಹಾಕ್ ಕಮಿಟಿಯನ್ನು ರಚಿಸಲಾಯಿತು.

ಮುಜ್ದೂರ್ ಪ್ರಜಾಪಕ್ಷದ ಮೈಸೂರು ವಿಭಾಗದ ತಾತ್ಕಾಲಿಕ ವಿಭಾಗದ ಕಚೇರಿಯನ್ನು ಮೈಸೂರು ಸ್ಯಾಂತೇಪೇಟೆಯಲ್ಲಿರುವ ಎಂಣೆ ಅಂಗಡಿ ಚಿನ್ನಪ್ಪನವರ ಪಿಲ್ಡಿಂಗ್ಸ್ ಮಹಡಿ ಮೇಲೆ (ಡೋ. ನಂ. 136) ಇರತಕ್ಕದ್ದೆಂತಲೂ ತೀರ್ಮಾನಿಸಲಾಯಿತು

ಅಖಂಡ ಭಾರತವೆಂದರೆ ಸಮರ ಎಂದರ್ಥ

ದೆಹಲಿ ರಕ್ತಕೋಟೆ ಮೇಲೆ ಪಂ|| ನೆಹರು ಅವರಿಂದ ಧ್ವಜಾರೋಹಣ ಮಾಡಲ್ಪಟ್ಟು, ಭಾರತ-ಪಾಕಿಸ್ತಾನಗಳನ್ನು ಒಂದುಗೂಡಿಸಬೇಕೆಂದು ಯಾರೇ ಹೇಳಿದರೂ ಅವರು ದೇಶ ಸೇವೆ ಮಾಡಿದಂತಲ್ಲ ಅಂಥ ಮಾತುಗಳಿಂದ ಆಗುವ ಒಂದೇ ಕಾರ್ಯವೆಂದರೆ ಯುದ್ಧ ಎಂದು ತಿಳಿಸಿದರು

× ಭಾರತದ ನಿಲುವು ಸತ್ಯ, ಧರ್ಮ, ನ್ಯಾಯ ಭರವಸೆ ಮುಕ್ತ ಸಂಜೆಕೆಯಿಂದ ಜನ ಮುಂದುವರಿಯಬೇಕು ಎಂದು ರಾಷ್ಟ್ರಪತಿಗಳು ದೆಹಲಿಯಿಂದ ಸಂದೇಶವಿತ್ತಿರುವರು

ಆರಾಧನೆ

ಮೈಸೂರು ಶ್ರೀರಾಂಪೇಟೆಯಲ್ಲಿರುವ ಶ್ರೀರಾಮಮಂದಿರ ದೇವಸ್ಥಾನದಲ್ಲಿ ತಾ|| 17 ರಿಂದ 19 ರ ವರೆಗೆ ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ ಏರ್ಪಡಿಸಲಾಗಿದೆ ಮಹಾಜನಗಳು ಸಕಾಲಕ್ಕೆ ಆಗಮಿಸಿ ಶ್ರೀ ಗುರು ರಾಜರಾಜರ ಪೂರ್ಣ ಅನುಗ್ರಹಕ್ಕೆ ಪಾತ್ರರಾಗಬೇಕಾಗಿ ಲೋಕಸೇವಾನಿರತ ಶ್ರೀ ಪಿ. ನಾರಾಯಣಂಶೆಯರು ಪ್ರಾರ್ಥಿಸುತ್ತಾರೆ.

ಲಕ್ಕವಳ್ಳಿ ಅಣೆಕಟ್ಟಿಗೆ ರೂ. 22 ಕೋಟಿ ತಗಲುವದೆಂದೂ 180 ಸಹಸ್ರ ಎಕರೆಗೆ ನೀರಾವರಿ ಸೌಕರ್ಯ ಕಲ್ಪಿಸುವದೆಂದೂ, ಕೇಂದ್ರ ಸರ್ಕಾರ ದೀರ್ಘಾವಧಿ ಮಟ್ಟದಲ್ಲಿ ಕೂಡಲೇ ಇದನ್ನು ಪ್ರಾರಂಭಿಸಬೇಕೆಂದೂ ಮೈಸೂರು ಹಣಕಾಸಿನ ಮಂತ್ರಿ ಶ್ರೀ ಗರಸಪ್ಪನವರು ಬೊಂಬಾಯಿನಲ್ಲಿ ಪತ್ರಿಕೋದ್ಯೋಗಿಗಳಿಗೆ ತಿಳಿಸಿರುವರು.

ಬೆಂಗಳೂರಿನ ಬಿ. ಎಂ ಎಸ್. ಇಂಜಿನಿಯರಿಂಗ್ ಕಾಲೇಜಿಗೆ ಸೀಟಿಗಾಗಿ 1600 ಅರ್ಜಿಗಳು ಹೋಗಿದ್ದವೆಂದೂ 180 ಮಂದಿಗೆ ಸೀಟು ಸಿಕ್ಕಿತೆಂದೂ ತಿಳಿದು ತಿಳಿಯಬಂದಿದೆ.

ಸೆಪ್ಟಂಬರಿನಲ್ಲಿ ಸ್ವಾತಂತ್ರ್ಯೋತ್ಸವದಲ್ಲಿ ಜರುಗುವ ಜಪಾನು ಶಾಂತಿ ಒಪ್ಪಂದಕ್ಕೆ ರಷ್ಯಾದಲ್ಲೂ ಒಪ್ಪಿದೆಯೆಂದು ವಾಷಿಂಗ್ಟನ್ ವಾರ್ತೆ

ಗಾಂಧಿ ಸೇವಾಸಂಘದಲ್ಲಿ

ಮೈಸೂರು ಡಿ. ಸುಬ್ಬಯ್ಯ ರಸ್ತೆಯಲ್ಲಿರುವ ಮಹಾತ್ಮ ಗಾಂಧೀ ಸೇವಾ ಸಂಘದ ಆಶ್ರಯದಲ್ಲಿ ನಿನ್ನೆ ಸಂಜೆ ಸ್ವಾತಂತ್ರ್ಯ ದಿನೋತ್ಸವವು ಮೈಸೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರ ನೇತೃತ್ವತೆಯಲ್ಲಿ ವೈಭವದಿಂದ ನೆರವೇರಿತು. ಶ್ರೀಗಳಾದ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎಂ ಆರ್ ಸಿ ಬಸಪ್ಪ, ಎಚ್ ಎನ್ ತಿಮ್ಮಯ್ಯ, ವಿಠಲ್‌ಸೂಂ ಹುಸೇನ್ ಇವರು ಭಾಷಣ ಮಾಡಿದರು ಗಾನವಿಶಾರದ ಬಿ ದೇವೇಂದ್ರಪ್ಪನವರ ಹಾಡುಗಾರಿಕೆ ಏರ್ಪಾಟಾಗಿತ್ತು ಸಂಘದ ಅಧ್ಯಕ್ಷ ಡಾ|| ಬಿ ಜಿ ದಾಸಪ್ಪನವರು ಸರ್ವರನ್ನೂ ಸ್ವಾಗತಿಸಿದರು

ಹಸಿದವರ ಪ್ರದರ್ಶನ

ಕಳೆದ ತಾ|| ರಲ್ಲಿ ಅಖಿಲ ಇಲಾಖೆ ಮುಂದೆ ಹೌಂಡಾ ಬಿಲ್ಲೆಯಿಂದ ಒಂದು ನೂರು ಮಂದಿ ಹಸಿದ ಹೊಟ್ಟೆಯವರು ಪ್ರದರ್ಶನ ಮಾಡಿದರೆಂದು ಕಲ್ಕತ್ತಾ ವರದಿ.

ಪಾರ್ಲಿಮೆಂಟಿನಲ್ಲಿ ಅಧಿಕ ಕಾರ್ಯಕ್ರಮಗಳಿರುವದರಿಂದಲೂ, ಹಿಂದೂ ಕೋಡು ವಿವಾದಾಸ್ಪದವಾಗಿರುವದರಿಂದಲೂ ಈ ಅಧಿವೇಶನದಲ್ಲಿ ಬರಲಾಗದೆಂದೂ, ಮುಂದಿನ ಚುನಾವಣಾ ನಂತರದ ವರೆಗೆ ಮುಂದುಕ್ಕೆ ಹೋಗುವದೆಂದೂ ಹೇಳಲಾಗಿದೆ.

ಕಳೆದ ಜುಲೈ 1 ಕ್ಕೆ ಆಗುವ ಮಾರ್ಕೆಟಿಂಗ್ ಇಲಾಖೆ ಪ್ರಗತಿ ಕುರಿತು ಮೈಸೂರು ಸರ್ಕಾರ ಪತ್ರಿಕಾ ಪ್ರಕಟಣೆ ಇದೆ.

ಉಡ್‌ಲಾಂಡ್ 17—8—51 ರಿಂದ

ತುಳಸಿ ವೃಂದ Tulsi Vrinda

ಪಾತ್ರ — ಈಶ್ವರಲಾಲ್, ರಂಜನ್

ಅಮೋಘ ಹಿಂದಿ ಚಿತ್ರ — ಪ್ರತಿದಿನ 3 ಆಟಗಳು

ಸೂಚನೆ — ಶ್ರೀ ಗಾಯಿತ್ರಿ ಜನ ವ್ಯಾಯಾಮ ಶಾಲೆ ಪತ್ರಿಕೆ ಇಲ್ಲ

ವಿವಾಹವಾಗು, ಇಲ್ಲವೇ ಜೈಲಿಗೆ ಹೋಗು !

ಯೂರ್ಪ್‌ದಲ್ಲಿಯ ಹೋಡೇಡ್ಡಾ ಪ್ರಾಂತ್ಯದಲ್ಲಿ ಜನಸಂಖ್ಯೆಯು ಅತ್ಯಂತ ಕಡಮೆಯಿದೆ ಈ ಪರಿಸ್ಥಿತಿಯನ್ನು ಕೊಂಚ ಸುಧಾರಿಸಲು ಬೇಕಾಗಿ ಅಲ್ಲಿಯ ಗೌರ್ನರು ಒಂದು ಹೊಸ ಆಜ್ಞೆ ಹೊರಡಿಸಲು ನಿರ್ಧರಿಸಿದರು ಬ್ರಹ್ಮಚಾರಿಗಳಿಗೆ ಮತ್ತು ಅವಿವಾಹಿತ ಕನ್ಯೆಯರಿಗೆ ಕೂಡಲೇ ವಿವಾಹವಾಗಬೇಕೆಂದು ಗೌರ್ನರರ ಕಟ್ಟಾಜ್ಞೆಯಾಯಿತು ವಿವಾಹವಾಗಲು ನಿರಾಕರಿಸಿದವರು ಜೈಲಿಗೆ ಹೋಗಬೇಕೆಂದೂ ಆ ಆಜ್ಞೆಯಲ್ಲಿ ಸೂಚಿಸಲಾಗಿತ್ತು. ಅವಿವಾಹಿತರು ಈ ಆಜ್ಞೆಯ ಕಠಿಣ ತೀವ್ರ ನಿಷೇಧ ವ್ಯಕ್ತಪಡಿಸಿ ಗುಲ್ಲೆಬ್ಬಿಸಿದರು. ಬೇರೆ ಉಪಾಯ ಕಾಣದೆ ಗೌರ್ನರು ಆಜ್ಞೆ ಬದಲಾಯಿಸಬೇಕಾಯಿತು.

ಪರೀಕ್ಷೆ ಕೊಟ್ಟವನೊಬ್ಬ, ಉದ್ಯೋಗ ದೊರಕಿದವ ಮತ್ತೊಬ್ಬ

ದಿಲ್ಲಿಯಲ್ಲಿ ವಿಚಿತ್ರ ಪ್ರಕರಣವೊಂದು ! ಅದು ನಡೆದು ಒಂದು ವರ್ಷ ನಂತರ ಈಗಲೀಗ ಬೆಳಕಿಗೆ ಬಂದಿದೆ ; ದಿಲ್ಲಿ ಮುನಿಸಿಪಾಲಿಟಿಯಲ್ಲಿ ಖಾಲಿ ಇರುವ ಒಂದು ಕೆಲಸಕ್ಕಾಗಿ ಒಬ್ಬನು ಒಂದು ವರ್ಷದ ಹಿಂದೆ ಅರ್ಜಿಮಾಡಿದ್ದನು ಆದೊಂದು ಪ್ರವೇಶ ಪರೀಕ್ಷೆಗೆ ಹಾಜರಾಗಬೇಕೆಂದು ಅತನಿಗೆ ತಿಳಿಸಲಾಗಿತ್ತು. ಪರೀಕ್ಷೆ ಕೊಡಲು ಅವನು ತನ್ನ ಪರ ಮತ್ತೊಬ್ಬನನ್ನು ಕಳಿಸಿಕೊಟ್ಟ ವಿಚಾರ ಅಧಿಕಾರಿಗಳಿಗೆ ತಿಳಿಯುಲಿಲ್ಲ. ಪರೀಕ್ಷೆ ಕೊಡಲು ಹೋದವನು ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಪರೀಕ್ಷೆ ಕೊಡದವನು ಕೆಲಸಕ್ಕೆ ಹಾಜರಾದನು. ಅನನಿಗೆ ಕೆಲಸವು ದೊರೆತು ಒಂದು ವರ್ಷದನಂತರ ಯಾರೋ ಒರ್ವ ಅಜ್ಞಾತನಿಂದ ಸಂಬಂಧಪಟ್ಟ ಮೇಲಧಿಕಾರಿಗಳಿಗೆ ಈ ಮೋಸದ ಪ್ರಕರಣ ಕುರಿತು ಒಂದು ಪತ್ರ ಬಂತು ; ವಿಚಾರಣೆ ನಡೆಸಲಾಗಿ ಅಜ್ಞಾತನಿಂದ ಬಂದ ಪತ್ರದಲ್ಲಿ ಉಲ್ಲೇಖಿಸಲ್ಪಟ್ಟ ವಿಷಯವು ಅಕ್ಷರಶಃ ನಿಜವಾಗಿತ್ತು.

ಮಾತ್ರೆ ತಿಂದು ಬದುಕುವವಳು

ಬ್ರಿಟ್ಟನಿನಲ್ಲಿ ಪ್ರತಿದಿನ ಸರಾಸರಿ 15 ಲಕ್ಷ ನಿದ್ದೆಯ ಮಾತ್ರೆಗಳು ಖರ್ಚಾಗುತ್ತಿವೆಯೆಂದು ಲೈಸೆನ್ಸರ್ ಸ್ಟ್ರೀ ವೈದ್ಯಳೊಬ್ಬಳು ಪ್ರಕಟಿಸಿರುವಳು. ಜೀವನದ ಧಾವಂತ ವಿಪರೀತ ಮಟ್ಟದ ನಿವಿತ್ತ ನಿದ್ದೆ ಬಾರದಿದ್ದುದಕ್ಕೆ ಜನರು ನಿದ್ದೆಯ ಮಾತ್ರೆಗಳನ್ನು ಸೇವಿಸುವುದೆಂದೂ, ಮುಂದಿನ ಜೀವನ ಭರ್ತಿ ಮಾಡಿಕೊಳ್ಳಲು ಅವರು ವಿಟಮಿನ್ ಮಾತ್ರೆಗಳಿಗೆ ಶರಣಾಗುವರೆಂದೂ ಆಕೆ ಕಾರಣ ಕೊಡುತ್ತಾಳೆ

SHAKTI SUDHA

A Superb Tonic

"ಗೋರಕ್ಷಣ"

ಕಾರ್ಯ ಎಲ್ಲೆಲ್ಲೂ ನಡೆಯಲಿ

Protect the Cow

ಐ. ಟಿ. ಎಲ್. ಗ್ರೈಪ್ ಸಿರಪ್

ನಿಮ್ಮ ಮುದ್ದು ಕಂದನ
ಅಜೀರ್ಣ ವ್ಯಾಧಿಗಳನ್ನು ತಡೆದು
ಆರೋಗ್ಯ ಕಾಪಾಡುವ ಅಮೃತವಾನ

— ತಯಾರಕರು —

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ ್ಟಿಂಗ್ ಲ್ಯಾಬೊರೇಟರಿ ಲಿಮಿಟೆಡ್

ಮಲ್ಲೇಶ್ವರಂ ಪೋಸ್ಟ್, ಬೆಂಗಳೂರು 3

ಶ್ರೇಷ್ಠತೆಯ ಹೆಗ್ಗುರುತು

ITL ಗ್ರೈಪ್ ಸಿರಪ್

OPERA

Aug. 10 th

Secrets Of Life

Married or Unmarried, youth deserves attention, Boys & Girls are entitled to know the 'SECRETS of LIFE' before their bodies are wrecked and their lives ruined.
All-star Hollywood cast
It is a sin to miss this Picture

ಸತ್ಯವಾದಿ

ದಿನಪತ್ರಿಕೆ ತಿಂಗಳಿಗೆ 6 ಆಣೆಗಳು

ರಣಜಿತ್

ಆಮೋಘ 2 ನೇ ವಾರ

ವಸಂತಬಾಲ, ಪ್ರೇಮನಾಥ್, ನಟಿಸಿರುವ

ಮನಮೋಹನ ಹಿಂದಿ ಚಿತ್ರ

ಬಾದಲ್

BADAL

ಪ್ರತಿ ದಿನ 3 ಪ್ರದರ್ಶನಗಳು

ಶಕ್ತಿಸುಧಾ

— ಉತ್ತಮವಾದ ಟಾನಿಕ್ —

ಸೋವಿಯೆಟ್ ರಾಷ್ಟ್ರೀಯ ಕ್ಯಾಂಪ್ ವಿರುದ್ಧ ಅಂತರ್ರಾಷ್ಟ್ರೀಯ ಪಿಯಾನೋ

Edited, Printed and Published by M. S. Krishna Rao. at the Satyavadi Press Chamrajpuram Mysore